# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮುಕ್ತಗಂಗೋತ್ರಿ, ಮೈಸೂರು-570 006

ಪ್ರವೇಶಾತಿ ವಿಭಾಗ

ಸಂಖ್ಯೆ: ಕರಾಮುವಿ/ಪ್ರವಿ/ಎಡಿಎಂ-1/111/2024-25/ಸಿನಂ: 38503 ದಿನಾಂಕ: 12.09.2024

**ಸುತ್ತೋಲೆ:**

ವಿಷಯ: ಪ್ರವೇಶಾತಿಗೆ ಬರುವ ವಿದ್ಯಾರ್ಥಿಗಳು ಡಿಜಿ ಲಾಕರ್ ಮೂಲಕ ABC ID (Academic Bank of Credits) ತೆರೆದು DEB ID ಗಳನ್ನು ತೆರೆಯುವ ಕುರಿತು;

ಉಲ್ಲೇಖ: 1. ಯುಜಿಸಿ ಪತ್ರ ಸಂಖ್ಯೆ: F.No: 1-6/2024(DEB-II) dated: 19.08.2024
2.2024-25ರ ಜುಲೈ ಆವೃತ್ತಿಯ ಪ್ರವೇಶಾತಿ ವಿವರಣಾ ಪುಸ್ತಕದಲ್ಲಿನ ಸೂಚನೆಗಳು
3.ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 10.09.2024

******

ಉನ್ನತ ಶಿಕ್ಷಣಕ್ರಮಗಳಿಗೆ ಪ್ರವೇಶಾತಿ ಬಯಸುವ ವಿದ್ಯಾರ್ಥಿಗಳು ತಾವು ಪ್ರವೇಶ ಪಡೆಯಲಚ್ಚಿಸುವ ಶಿಕ್ಷಣ ಕಾರ್ಯಕ್ರಮಗಳ ಹಾಗೂ ಆಯಾ ವಿವಿ ನಿಲಯಗಳ/ಉನ್ನತ ಶಿಕ್ಷಣ ಸಂಸ್ಥೆಗಳ ವಿಶ್ವಾಸಾರ್ಹತೆ ದೃಢಪಡಿಸಿಕೊಳ್ಳಲು ಹಾಗೂ ಓಡಿಎಲ್ / ಆನ್‌ಲೈನ್ ಪ್ರವೇಶಾತಿ ಪ್ರಕ್ರಿಯೆಯಲ್ಲಿ ಹೆಚ್ಚಿನ ಪಾರದರ್ಶಕತೆ ತರುವ ನಿಟ್ಟಿನಲ್ಲಿ ವಿದ್ಯಾರ್ಥಿಗಳು ಪ್ರವೇಶಾತಿ ಹೊಂದುವ ಪೂರ್ವದಲ್ಲಿ ABC ID (Academic Bank of Credits) ತೆರೆಯುವ ಮೂಲಕ DEB ID ಹೊಂದುವುದು ಕಡ್ಡಾಯವಾಗಿದ್ದು, ಆಯಾ ಉನ್ನತ ಶಿಕ್ಷಣ ಸಂಸ್ಥೆಗಳು ಇದನ್ನು ಜಾರಿಗೊಳಿಸಲು ಯುಜಿಸಿಯು ಉಲ್ಲೇಖಿತ ಪತ್ರದಲ್ಲಿ ತಿಳಿಸಿರುತ್ತದೆ.

ಈ ಸಂಬಂಧ, ವಿವಿ ನಿಲಯವು 2024-25 ರ ಜುಲೈ ಆವೃತ್ತಿಯ ಪ್ರವೇಶಾತಿ ಸಂಬಂಧದಲ್ಲಿ ಪ್ರಕಟಿಸಿರುವ ಆಯಾ ಶಿಕ್ಷಣಕ್ರಮಗಳ ವಿವರಣಾ ಪುಸ್ತಕದಲ್ಲಿ ವಿವರಣೆ ನೀಡಿ ಅನುಸರಿಸಬೇಕಾದ ಕ್ರಮಗಳನ್ನು ತಿಳಿಸಲಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ವಿದ್ಯಾರ್ಥಿ ಪ್ರವೇಶ ಬಯಸುವ ಶಿಕ್ಷಣಕ್ರಮಗಳಿಗೆ ಪ್ರವೇಶ ಪಡೆಯುವ ಸಂದರ್ಭದಲ್ಲಿ ಕಡ್ಡಾಯವಾಗಿ ವಿದ್ಯಾರ್ಥಿಗೆ ಈ ಬಗ್ಗೆ ಮಾಹಿತಿ ನೀಡಿ, ಅಗತ್ಯ ದಾಖಲಾತಿಗಳನ್ನು ಪಡೆದು, ಡಿಜಿ ಲಾಕರ್ ಮೂಲಕ ABC ID (Academic Bank of Credits) ತೆರೆದು, ಇದರ ಮೂಲಕ DEB ID ತೆರೆಯುವುದು. ಇವೆರಡರ ವಿವರಗಳನ್ನು ಆಯಾ ವಿದ್ಯಾರ್ಥಿಯ ಪ್ರವೇಶಾತಿ ಅರ್ಜಿಯಲ್ಲಿ ಹಾಗೂ ನಂತರದಲ್ಲಿ ಪ್ರವೇಶಾತಿ ಪಟ್ಟಿಯಲ್ಲಿ ದಾಖಲಿರುವಂತೆ ಕ್ರಮವಹಿಸುವುದು.

ಒಂದು ವೇಳೆ, ಮೇಲಿನ ಎರಡು ಐಡಿಗಳನ್ನು ತೆರೆಯದೇ ಪ್ರವೇಶಾತಿಗೆ ಕ್ರಮವಹಿಸಿದಲ್ಲಿ ಆ ವಿದ್ಯಾರ್ಥಿಯ ಶೈಕ್ಷಣಿಕ ವಿವರಗಳನ್ನು ಡೆಬ್ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲು ಸಾಧ್ಯವಾಗುವುದಿಲ್ಲ. ಹಾಗಾಗಿ ಈ ಕುರಿತು ನೀಡಿರುವ ಸೂಚನೆಗಳನ್ವಯ ಕ್ರಮವಹಿಸಿ ಪ್ರವೇಶಾತಿ ಸಮಯದಲ್ಲಿಯೇ ಕಡ್ಡಾಯವಾಗಿ ABC ID (Academic Bank of Credits) ತೆರೆದು, ಇದರ ಮೂಲಕ DEB ID ತೆರೆದು ಕ್ರಮವಹಿಸುವುದು. ಈಗಾಗಲೇ ಪ್ರವೇಶ ಹೊಂದಿರುವ ವಿದ್ಯಾರ್ಥಿಗಳ ಪರವಾಗಿಯೂ ಐಡಿಗಳನ್ನು ತೆರೆದು ಕ್ರಮವಹಿಸುವುದು.

ಮೇಲಿನ ಐಡಿಗಳನ್ನು ತೆರೆಯುವಲ್ಲಿ ಏನಾದರೂ ತೊಂದರೆಗಳು ಉಂಟಾದಲ್ಲಿ ತಾಂತ್ರಿಕ ಸಹಾಯಕರುಗಳಾದ 1. ಶ್ರೀ ಎಂ.ಮಲ್ಲೇಶ್ – 8105261434 ಹಾಗೂ 2. ಶ್ರೀಮತಿ ಡಿ.ಎಂ.ನಿಶ್ಚಿತ – 7019204199 ಇವರುಗಳನ್ನು ಹಾಗೂ ಪ್ರವೇಶಾತಿ ಆನ್‌ಲೈನ್ ನಿರ್ವಹಣೆ ತಂಡವನ್ನು ಸಂಪರ್ಕಿಸಿ ಬಗೆಹರಿಸಿಕೊಳ್ಳಲು ತಿಳಿಸಲಾಗಿದೆ.

ಕುಲಸಚಿವ

ಗೆ:

1. ಉಪಕುಲಸಚಿವರು (ಪ್ರವೇಶಾತಿ), ಕರಾಮುವಿ, ಮೈಸೂರು.
2. ಪ್ರಾದೇಶಿಕ ನಿರ್ದೇಶಕರು, ಕರಾಮುವಿಯ ಎಲ್ಲಾ ಪ್ರಾದೇಶಿಕ ಕೇಂದ್ರಗಳು – ಮೇಲ್ ಮೂಲಕ.
3. ಸಂಯೋಜನಾಧಿಕಾರಿಗಳು ನ್ಯಾಡ್ / ಎಬಿಸಿ ಘಟಕ, ಕರಾಮುವಿ, ಮೈಸೂರು – ಅಗತ್ಯ ಸಹಕಾರದೊಂದಿಗೆ ಸೂಕ್ತ ವ್ಯವಸ್ಥೆ ಮಾಡಿ ಎಲ್ಲಾ ವಿದ್ಯಾರ್ಥಿಗಳ ಪರವಾಗಿ ABC ID & DEB ID ತೆರೆಸಲು ಕ್ರಮವಹಿಸುವುದು.

ಪ್ರತಿ.

1. ಎಲ್ಲಾ ಶಾಸನಬದ್ಧ ಅಧಿಕಾರಿಗಳು, ಕರಾಮುವಿ, ಮೈಸೂರು.
2. ಡೀನ್ (ಅಧ್ಯಯನ ಕೇಂದ್ರಗಳು), ಕರಾಮುವಿ, ಮೈಸೂರು.
3. ಸಂಯೋಜನಾಧಿಕಾರಿಗಳು ನ್ಯಾಡ್ / ಎಬಿಸಿ ಘಟಕ, ಕರಾಮುವಿ, ಮೈಸೂರು.
4. ಎಲ್ಲಾ ಸಂಯೋಜನಾಧಿಕಾರಿಗಳು, ಕರಾಮುವಿ ಕಲಿಕಾರ್ಥಿ ಸಹಾಯ ಕೇಂದ್ರಗಳು – ಮೇಲ್ ಮೂಲಕ - ತಮ್ಮ ಕೇಂದ್ರದ ಸೂಚನಾ ಫಲಕದಲ್ಲಿ ಪ್ರಕಟಿಸಿ ವಿದ್ಯಾರ್ಥಿಗಳಿಗೆ ಮಾಹಿತಿ ನೀಡುವುದು.
5. ಸಂಯೋಜನಾಧಿಕಾರಿಗಳು ವಿದ್ಯಾರ್ಥಿ ವೇತನ ಘಟಕ, ಕರಾಮುವಿ, ಮೈಸೂರು.
6. ಎಲ್ಲಾ ಅಧ್ಯಯನ ವಿಭಾಗಗಳ ಮುಖ್ಯಸ್ಥರು, ಕರಾಮುವಿ - – ಮೇಲ್ ಮೂಲಕ
7. ಎಲ್ಲಾ ನಿರ್ದೇಶಕರುಗಳು / ವಿಶೇಷಾಧಿಕಾರಿಗಳು / ಸಂಯೋಜನಾಧಿಕಾರಿಗಳು/ವಿದ್ಯಾರ್ಥಿ ಕ್ಷೇಮಪಾಲನಾ ಅಧಿಕಾರಿಗಳು -

8. ನಿರ್ದೇಶಕರು-ಐಟಿ, ಕರಾಮುವಿ - ಇವರಿಗೆ ಈ ಕ್ರಮವನ್ನು ಆನ್‌ಲೈನ್ ಶಿಕ್ಷಣಕ್ರಮಗಳ ಪ್ರವೇಶಾತಿಯಲ್ಲಿಯೂ ಅನುಸರಿಸುವುದು.
9. ಎಲ್ಲಾ ಉಪಕುಲಸಚಿವರು / ಸಹಾಯಕ ಕುಲಸಚಿವರು ಕರಾಮುವಿಯಲ್ಲಿನ ವಿವಿಧ ವಿಭಾಗಗಳು. – ಮೇಲ್ ಮೂಲಕ.
10. ಡಾ:ಸಿ.ಜಿ.ನವೀನ್ ಕುಮಾರ್, ಸಂಯೋಜನಾಧಿಕಾರಿಗಳು, ವಿವಿ ಅಂತರ್ಜಾಲ ನಿರ್ವಹಣೆ, ಕರಾಮುವಿ - ಇವರಿಗೆ ಸದರಿ ಸುತ್ತೋಲೆಯನ್ನು ವಿವಿಯ ಅಧಿಕೃತ ಅಂತರ್ಜಾಲದಲ್ಲಿ ತುರ್ತಾಗಿ ಅಪ್‌ಲೋಡ್ ಮಾಡುವುದು ಹಾಗೂ KSOU Academic Platform App ನಲ್ಲಿ ಅಪ್‌ಲೋಡ್ ಮಾಡಿಸುವುದು.
11. ವಿಶೇಷಾಧಿಕಾರಿಗಳು, ಮಾನ್ಯ ಕುಲಪತಿಗಳ ಆಪ್ತಶಾಖೆ, ಕರಾಮುವಿ, ಮೈಸೂರು.
12. ಇನ್‌ಹಾಕ್ ಐಟಿ ಸಲ್ಯೂಷನ್ಸ್ ಪ್ರತಿನಿಧಿಗಳು – ಆಫ್‌ಲೈನ್ ಶಿಕ್ಷಣಕ್ರಮಗಳ ಪ್ರವೇಶಾತಿ ಪ್ರಕ್ರಿಯೆಯ ನಿರ್ವಹಣೆ ಪ್ರಸ್ತುತದ ಪ್ರವೇಶಾತಿ ಸಾಫ್ಟ್‌ವೇರ್‌ನಲ್ಲಿ ಅಗತ್ಯ ವ್ಯವಸ್ಥೆ ಕಲ್ಪಿಸುವುದು.
13. ಎಲ್ಲಾ ಅಧೀಕ್ಷಕರು / ಕಾರ್ಯನಿರ್ವಾಹಕರು, ಪ್ರವೇಶಾತಿ ವಿಭಾಗ, ಕರಾಮುವಿ, ಮೈಸೂರು.
14. ವಿವಿ ನಿಲಯದ ಸೂಚನಾ ಫಲಕಗಳು / ಮಾಹಿತಿ ಮತ್ತು ಮಾರ್ಗದರ್ಶಕ ಘಟಕ, ಪ್ರವೇಶಾತಿ ವಿಭಾಗ, ಕರಾಮುವಿ.
15. ಕಚೇರಿ ಪ್ರತಿ.